# ‘ಬಡವರಿಗಾಗಿ ಒಂದು ಅರಮನೆ’

❑ ಸ್ವಾಮಿ ವೀರೇಶಾನಂದ

**ರಾಮಕೃಷ್ಣ ವಿವೇಕಾನಂದ ಭಾವಧಾರೆ ದಕ್ಷಿಣಭಾರತದಲ್ಲಿ ಸ್ಪಷ್ಟವಾದ ರೂಪು ತಳೆಯುತ್ತಿದ್ದ ಆರಂಭದ ದಿನಗಳಲ್ಲಿ ಬಡಜನರ ವಿದ್ಯಾಭ್ಯಾಸಕ್ಕೆ ಮೊದಲ ಆದ್ಯತೆ ಕೊಟ್ಟು, ವಿಸ್ಮಯಕಾರಿಯಾದ ರೀತಿಯಲ್ಲಿ ಬೆಳೆದು ಬಂದಿರುವ ಚೆನ್ನೈನಲ್ಲಿನ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್‌ನ ಸೂಕ್ಷ್ಮ ಪರಿಚಯ ಮಾಡಿಕೊಟ್ಟಿರುವ ಸ್ವಾಮಿ ವೀರೇಶಾನಂದರು ಮೈಸೂರು ರಾಮಕೃಷ್ಣ ಆಶ್ರಮದ ವಿವೇಕಪ್ರಭ ಪತ್ರಿಕೆಯ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವರು.**

**ಸ್ವಾ**ಮಿ ವಿವೇಕಾನಂದರು ಮದರಾಸಿಗೆ (ಈಗಿನ ಚೆನ್ನೈ) ಭೇಟಿಯಿತ್ತಿದ್ದಾಗ ಅಲ್ಲಿನ ಅನೇಕ ತರುಣರ ಮೇಲೆ ಆಳವಾದ ಪ್ರಭಾವವನ್ನು ಬೀರಿದ್ದರು. ಈ ಉತ್ಸಾಹೀ ತರುಣವೃಂದವೇ ಮುಂದೆ ದಕ್ಷಿಣಭಾರತದಲ್ಲಿ ರಾಮಕೃಷ್ಣ ವಿವೇಕಾನಂದ ಆಂದೋಲನವು ಪ್ರಭಾವಶಾಲಿಯಾಗಿ ಬೆಳೆಯಲು ಕಾರಣವಾಯಿತು ಎಂದರೆ ತಪ್ಪಾಗಲಾರದು. ಈ ಆಂದೋಲನದ ಮುಂಚೂಣಿಯಲ್ಲಿರಲು ಸ್ವಾಮಿ ವಿವೇಕಾನಂದರು (ಸ್ವಾಮೀಜಿಯವರು) ಆಯ್ಕೆ ಮಾಡಿದ್ದು ತಮ್ಮ ಗುರುಭಾಯಿಯಾದ ಸ್ವಾಮಿ ರಾಮಕೃಷ್ಣಾನಂದರನ್ನೇ. ಸ್ವಾಮಿ ರಾಮಕೃಷ್ಣಾನಂದರು ತಮ್ಮ ನಾಯಕನ ಆದೇಶದಂತೆ, ಮದರಾಸಿಗೆ ಬಂದು ಈ ನೂತನ ವೇದಾಂತದ ಆಂದೋಲನ ದಕ್ಷಿಣಭಾರತದಲ್ಲಿ ಬೇರುಬಿಡಲು ತಮ್ಮ ಬದುಕನ್ನೇ ಬಲಿದಾನ ಕೊಟ್ಟಿದ್ದು ಈಗ ಇತಿಹಾಸ. ಆಗ ಸ್ವಾಮೀಜಿಯವರ ವಾಣಿಗಳಿಂದ ಸ್ಫೂರ್ತಿಪಡೆದ ಕೆಲವು ತರುಣರಿಗೆ ಸ್ವಾಮಿ ರಾಮಕೃಷ್ಣನಂದರು ದೊಡ್ಡ ಆಸರೆಯಾದರು. ಈ ತರುಣರು ಸ್ವಾಮೀಜಿಯವರ ವಿಚಾರಗಳನ್ನು ಕೃತಿಗಿಳಿಸುವ, ಅವುಗಳಿಗೆ ಸ್ಪಷ್ಟವಾದ ಆಕಾರ ಕೊಡುವ ಸನ್ನಾಹದಲ್ಲಿದ್ದರು.

ಒಮ್ಮೆ ಸ್ವಾಮಿ ವಿವೇಕಾನಂದರ ದರ್ಶನ ಮತ್ತು ವಾಣಿಗಳಿಂದ ಸ್ಫೂರ್ತಿಗೊಂಡ ಒಬ್ಬ ಯುವಕ ಚೆನ್ನೈ ನಗರದ ಸರ್ಕಾರಿ ಕಛೇರಿಯಲ್ಲಿ ಉದ್ಯೋಗದಲ್ಲಿದ್ದ. ಆತನಿಗೆ ಸ್ವಾಮಿ ರಾಮಕೃಷ್ಣಾನಂದರೊಡನೆ ಸಖ್ಯ ಬೆಳೆಯಿತು. ಅವರು ಆ ಯುವಕನನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಒಮ್ಮೆ, ಅವರಿಬ್ಬರ ಮಾತುಕತೆ ಅನ್ನ ಆಶ್ರಯಗಳಿಲ್ಲದೆ ಬೀದಿಪಾಲಾಗಿರುವ ಪ್ರಾಮಾಣಿಕ ವಿದ್ಯಾರ್ಥಿಗಳ ಕಡೆ ತಿರುಗಿತು. ಸ್ವಾಮಿ ರಾಮಕೃಷ್ಣಾನಂದರ ಹೃದಯ ಆ ಬಡಹುಡುಗರ ಕಷ್ಟಕಾರ್ಪಣ್ಯಗಳನ್ನು ಕಂಡು ವೇದನೆಯನ್ನು ಅನುಭವಿಸುತ್ತಿತ್ತು. ಅವರು ಹೇಳಿದರು, “ಪ್ರಿಯ ರಾಮು, ನನ್ನ ಬಳಿ ಸಹಾಯವನ್ನು ಕೇಳಿಕೊಂಡು ಹಲವಾರು ಹುಡುಗರು ಬರುತ್ತಾರೆ. ಆದರೆ ಮಠದ ಈ ದುರ್ಭರ ಹಣಕಾಸಿನ ಪರಿಸ್ಥಿತಿಯಲ್ಲಿ ನಾನೇನು ತಾನೇ ಮಾಡಬಲ್ಲೆ? ನನ್ನಲ್ಲಿರುವ ಅಲ್ಪಸ್ವಲ್ಪ ಹಣದಿಂದ ಒಬ್ಬ ಹುಡುಗನಿಗೆ ಆಶ್ರಯ ಕೊಟ್ಟಿದ್ದೇನೆ. ಆದರೆ ಅದೂ ಕಷ್ಟವಾಗಿ ತೋರುತ್ತ ಇದೆ.” ಸ್ವಾಮಿಗಳ ಆಶ್ರಯದಲ್ಲಿ ಇದ್ದ ಆ ಹುಡುಗ ಮೈಸೂರಿನಿಂದ ಹೋಗಿದ್ದ ಒಬ್ಬ ಅನಾಥ ಬಾಲಕ. ಅವನ ತಂದೆ ತಾಯಿಗಳು ಪ್ಲೇಗಿನಿಂದ ಮರಣಹೊಂದಿದ್ದರು. ಚೆನ್ನೈನಂತಹ ಶ್ರೀಮಂತ ಪಟ್ಟಣದಲ್ಲಿ ಅವನಿಗೆ ಆಶ್ರಯ ನೀಡಲು ಮುಂದಾದವರೆಂದರೆ ಸ್ವಾಮಿ ರಾಮಕೃಷ್ಣಾನಂದರೊಬ್ಬರೇ. ಆಗ ಆ ಯುವಕ ಆ ಬಾಲಕನಿಗೆ ಊಟ ವಸತಿಗಳ ವ್ಯವಸ್ಥೆ ಮಾಡಲು ಮುಂದಾದ. ಆ ಯುವಕನ ಹೆಸರು ಸಿ. ರಾಮಸ್ವಾಮಿ ಅಯ್ಯಂಗಾರ್.

ಒಮ್ಮೆ ರಾಮಸ್ವಾಮಿ ಅಯ್ಯಂಗಾರ್ ರಾಮಕೃಷ್ಣ ಮಠದ ಪಕ್ಕದಲ್ಲಿದ್ದ ಅಶ್ವತ್ಥಮರವನ್ನು ಹಾದುಹೋಗುತ್ತಿದ್ದಾಗ, ಮರದ ಕೆಳಗೆ ಕುಳಿತಿದ್ದ ಆಂಧ್ರದಿಂದ ಬಂದಿದ್ದ ನಾಲ್ಕು ಬಾಲಕರನ್ನು ಕಂಡರು. ಚೆನ್ನೈ ನಗರದಲ್ಲಿ ಅವರಿಗೆ ಊಟ ಉಸತಿಗಳನ್ನು ಕೊಡುವವರು ಯಾರೂ ಇರಲಿಲ್ಲ. ಹಸಿವು ನಿರಾಸೆಗಳಿಂದ ಕಂಗೆಟ್ಟಿದ್ದ ಅವರನ್ನು ಕಂಡು ರಾಮಸ್ವಾಮಿಗಳ ಹೃದಯ ಕರಗಿತು. ತಮ್ಮ ಮನೆಯಲ್ಲಿಯೇ ಅವರಿಗೆ ಊಟ ಹಾಕಿ ಇತರೆಡೆ ವಸತಿಗೆ ಏರ್ಪಾಡು ಮಾಡಿದರು. ಅಂದು ಸಂಜೆ ಸ್ವಾಮಿ ರಾಮಕೃಷ್ಣಾನಂದರ ಬಳಿ ಹೋಗಿ ಬಡಮಕ್ಕಳಿಗಾಗಿ ಒಂದು ವಿದ್ಯಾರ್ಥಿ ನಿಲಯವನ್ನು ಆರಂಭಿಸುವ ಇಚ್ಛೆ ತಮಗಿರುವುದಾಗಿ ತೋಡಿಕೊಂಡರು. ಸ್ವಾಮಿಗಳು ಈ ಕಾರ್ಯ ಬಹಳ ಕಠಿಣವಾದದ್ದೆಂದು ಎಚ್ಚರಿಸಿದರು. ಆದರೆ ರಾಮಸ್ವಾಮಿಗಳು ಎದೆಗುಂದಲಿಲ್ಲ. ಆಗ ಸ್ವಾಮಿಗಳು ಹೇಳಿದರು, “ರಾಮು, ನಿನಗೆ ನಿನ್ನಲ್ಲಿ ವಿಶ್ವಾಸವಿದ್ದರೆ, ನಿನ್ನಿಂದ ಅದ್ಭುತ ಕಾರ್ಯಗಳು ಆಗುತ್ತವೆ.”

ರಾಮಸ್ವಾಮಿ ಅಯ್ಯಂಗಾರರ ಈ ಸಂಕಲ್ಪ ಶೀಘ್ರವೇ ಕಾರ್ಯರೂಪಕ್ಕೆ ಬಂದಿತು. ಅನೇಕ ಸ್ನೇಹಿತರು, ಹಿತೈಷಿಗಳು ಮುಂದೆ ಬಂದು ಸಹಾಯ ಮಾಡಿದರು. ಅಂದು ೧೯೦೫ನೆಯ ಇಸವಿ ಫೆಬ್ರವರಿ ೧೭ನೇ ತಾರೀಖಿನ ಗೋಧೂಳಿ ಲಗ್ನದ ಸಮಯ. ವಸತಿಗೃಹಕ್ಕಾಗಿ ಬಾಡಿಗೆಗೆ ತೆಗೆದುಕೊಂಡಿದ್ದ ಮನೆ ಅಂದವಾಗಿ ಅಲಂಕಾರಗೊಂಡಿತ್ತು. ಶ್ರೀರಾಮಕೃಷ್ಣರ ಭಾವಚಿತ್ರವನ್ನು ಇರಿಸಲಾಗಿತ್ತು. ಅದರ ಪೂಜೆಗೆ ಎಲ್ಲವೂ ಅಣಿಯಾಗಿತ್ತು. ನಿಗದಿತ ಸಮಯಕ್ಕೆ ಸ್ವಾಮಿ ರಾಮಕೃಷ್ಣಾನಂದರು ಬಂದರು. ಶ್ರೀರಾಮಕೃಷ್ಣರಿಗೆ ಪೂಜೆ ಸಲ್ಲಿಸಿದರು. ಸ್ವಲ್ಪಹೊತ್ತು ಧ್ಯಾನ ಮಾಡಿದರು. ನಂತರ ಹೀಗೆ ನುಡಿದರು: “ಅನ್ನದಾನವು ಮಹಾದಾನ ಎಂದು ಹೇಳಲಾಗಿದೆ. ನಮ್ಮ ದೇಶದಲ್ಲಿ ಅದು ಬಹಳ ಪವಿತ್ರ ಎಂದು ಬಗೆಯುವರು. ಆದರೆ, ವಿದ್ಯಾದಾನವು ಅದಕ್ಕಿಂತ ಶ್ರೇಷ್ಠವಾದುದು. ಅದಕ್ಕಿಂತಲೂ ಪರಮೋತ್ಕೃಷ್ಟವಾದುದು ಆಧ್ಯಾತ್ಮಿಕ ಜ್ಞಾನದಾನ. ಈ ಸಂಸ್ಥೆಯ ಉದ್ದೇಶ ಇವು ಮೂರು ದಾನಗಳ ಸಮನ್ವಯ. ಶ್ರೀರಾಮಕೃಷ್ಣರು ಈ

ಕಾರ್ಯವನ್ನು ಸಫಲಗೊಳಿಸಲಿ." ಬಳಿಕ ಆರತಿಯಾಗಿ ಪ್ರಸಾದವನ್ನು ವಿತರಿಸಲಾಯಿತು. ನಂತರ ಅಡಿಗೆ ಮನೆಯ ಒಲೆ ಹೊತ್ತಿಸಿ, ಅಡುಗೆ ಮಾಡಲಾಯಿತು. ಇದ್ದ ಏಳು ಜನ ವಿದ್ಯಾರ್ಥಿಗಳು ಆ ವಿದ್ಯಾರ್ಥಿನಿಲಯದಲ್ಲಿ ತಮ್ಮ ಮೊದಲ ಊಟವನ್ನುಂಡರು.

೧೯೦೫ರ ಕಡೆಯ ಭಾಗದಲ್ಲಿ ವಿದ್ಯಾರ್ಥಿನಿಲಯವನ್ನು ಕೇಶವ ಪೆರುಮಾಳ್ ದೇವಸ್ಥಾನದ ರಸ್ತೆಗೆ ಸ್ಥಾನಾಂತರಿಸಲಾಯಿತು. ಪ್ರತಿವರ್ಷ ದೇಣಿಗೆ ಕೊಡುವವರ ಸಂಖ್ಯೆ ೫೦ಕ್ಕೆ ಏರಿತು. ೧೯೦೬ರಲ್ಲಿ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಪ್ರೇಮಾನಂದರು ತಮ್ಮ ತಾಯಿಯ ಜೊತೆಗೆ ರಾಮೇಶ್ವರ ಯಾತ್ರೆಯನ್ನು ಮಾಡಲು ಚೆನ್ನೈಗೆ ಬಂದರು. ಒಂದು ದಿನ ಅವರು ಸ್ವಾಮಿ ರಾಮಕೃಷ್ಣಾನಂದರೊಡನೆ ವಿದ್ಯಾರ್ಥಿನಿಲಯಕ್ಕೂ ಭೇಟಿ ಇತ್ತರು. ೧೯೦೭ರಲ್ಲಿ ಮೈಸೂರಿನ ಮಹಾರಾಜರು ಚೆನ್ನೈಗೆ ಭೇಟಿಕೊಟ್ಟರು. ಅವರ ಆಪ್ತ ಸಹಾಯಕರೊಬ್ಬರು ವಿದ್ಯಾರ್ಥಿನಿಲಯಕ್ಕೆ ಭೇಟಿಕೊಟ್ಟು, ಬಾಲಕರು ಶಿಕ್ಷಣ ಪಡೆಯುವುದರ ಜೊತೆಗೆ ಎಲ್ಲ ತರದ ದೈಹಿಕ ಕಾರ್ಯಗಳನ್ನೂ ಮಾಡುತ್ತಿರುವುದನ್ನು ಕಂಡು ಸಂತೋಷಪಟ್ಟು, ಮಹಾರಾಜರ ವತಿಯಿಂದ ದೇಣಿಗೆ ಕೊಡಿಸಿದರು.

ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದರು ವಿದ್ಯಾರ್ಥಿನಿಲಯಕ್ಕೆ ಪ್ರಥಮ ಬಾರಿಗೆ ೧೯೦೮ರಲ್ಲಿ ಭೇಟಿ ಕೊಟ್ಟರು. ಸ್ವಾಮಿ ರಾಮಕೃಷ್ಣಾನಂದರು ಹೇಳುತ್ತಿದ್ದರು, ಸ್ವಾಮಿ ಬ್ರಹ್ಮಾನಂದರು ಮುಟ್ಟಿದ್ದೆಲ್ಲ ಪರಿಶುದ್ಧವಾಗುವುದು ಮಾತ್ರವಲ್ಲ, ಪರಿಶುದ್ಧಗೊಳಿಸುವ ಶಕ್ತಿಯನ್ನೂ ಹೊಂದುತ್ತದೆ ಎಂದು. ಅವರ ಈ ಬಗೆಯ ಅಗಾಧ ಆಧ್ಯಾತ್ಮಿಕ ಶಕ್ತಿಸಿಂಚನವನ್ನು ವಿದ್ಯಾರ್ಥಿನಿಲಯವು ಪಡೆಯಿತು.

ಸ್ವಾಮಿ ರಾಮಕೃಷ್ಣಾನಂದರು ವಿದ್ಯಾರ್ಥಿನಿಲಯದ ಎಲ್ಲ ಚಟುವಟಿಕೆಗಳ ಹಿಂದಿನ ಪ್ರೇರಕಶಕ್ತಿಯಾಗಿದ್ದರು. ಪ್ರತಿವಾರವೂ ಬಾಲಕರಿಗೆ ಧರ್ಮಬೋಧನೆಯ ತರಗತಿಗಳನ್ನು ನಡೆಸುತ್ತಿದ್ದರು. ಮಠವು ಮೈಲಾಪುರ ಬಡಾವಣೆಗೆ ಸ್ಥಳಾಂತರ ಹೊಂದಿದ ಮೇಲೆ ಪ್ರತಿ ಬುಧವಾರ ಬಾಲಕರು ಅಲ್ಲಿಗೇ ಹೋಗುತ್ತಿದ್ದರು. ಸ್ವಾಮಿ ರಾಮಕೃಷ್ಣಾನಂದರು ಅವರಿಗೆ ಭಾಗವತದ ಕಥೆಗಳನ್ನು ಮತ್ತು ಭಗವದವತಾರಗಳ ಬಗ್ಗೆ ಮತ್ತು ಮಹಾಪುರುಷರ ಜೀವನಚರಿತ್ರೆಗಳನ್ನು ಹೇಳುವರು. ಪ್ರತಿ ತರಗತಿಯ ಕಡೆಯಲ್ಲಿ ತಾವು ಕೇಳಿದ ಬೋಧನೆಗಳನ್ನು ಆಚರಣೆಗೆ ತರುವಂತೆ ಬಾಲಕರನ್ನು ಪ್ರೇರೇಪಿಸುತ್ತಿದ್ದರು. ಅವರು ಬಹಳ ಮುಖ್ಯವಾಗಿ ಮಹತ್ವ ಕೊಡುತ್ತಿದ್ದುದು ಯಾವುದೇ ಕೆಲಸಕ್ಕೂ ಗೌರವ ಕೊಡುವುದನ್ನು. ಅವರು ಹೇಳುತ್ತಿದ್ದರು, ಒಬ್ಬ ಚೆನ್ನಾಗಿ ನೆಲ ಸಾರಿಸಬಲ್ಲನಾದರೆ ಅವನು ಧ್ಯಾನವನ್ನೂ ಚೆನ್ನಾಗಿ ಮಾಡಬಲ್ಲ ಎಂದು. ಸ್ವಾಮಿ ರಾಮಕೃಷ್ಣಾನಂದರು ಆಚರಿಸಿ ಬೋಧಿಸಿದ ಕರ್ಮಯೋಗವೇ ವಿದ್ಯಾರ್ಥಿನಿಲಯದಲ್ಲಿ ಮುಂದೆ ಪ್ರತ್ಯಕ್ಷವಾಗಿ ಆಚರಣೆಗೆ ತರಲು ಯತ್ನಿಸಲಾದ ಒಂದು ಆದರ್ಶವಾಗಿ ಪರಿಣಮಿಸಿತು.



ವಿದ್ಯಾರ್ಥಿ ನಿಲಯದ ಹಿಂದಿನ ಪ್ರೇರಕ ಶಕ್ತಿಗಳಾದ ಸ್ವಾಮಿ ಬ್ರಹ್ಮಾನಂದರು ಮತ್ತು ಸ್ವಾಮಿ ರಾಮಕೃಷ್ಣಾನಂದರು

ಸ್ವಾಮಿ ರಾಮಕೃಷ್ಣಾನಂದರು ಬಡವರ ಮೇಲೆ ಅಪಾರ ಕರುಣೆ ಪ್ರೇಮಗಳನ್ನು ಹೊಂದಿದ್ದರು. ರಾಮಸ್ವಾಮಿ ಅಯ್ಯಂಗಾರರು ವಿದ್ಯಾರ್ಥಿನಿಲಯದ ಮೊದಲ ವಾರ್ಷಿಕ ವರದಿಯನ್ನು ಅವರಿಗೆ ಒಪ್ಪಿಸಿದಾಗ ಅವರು ಹೀಗೆ ನುಡಿದರು: "ಈ ಸಂಸ್ಥೆಯು ರಾಮಕೃಷ್ಣ ವಿದ್ಯಾರ್ಥಿನಿಲಯ ಎಂಬ ಹೆಸರು ಪಡೆದಿದೆ. ದೀನದಲಿತರಲ್ಲಿ ಅಗಾಧ ಪ್ರೇಮ ಹೊಂದಿದ್ದ ಪರಮಪೂಜ್ಯ ಶ್ರೀರಾಮಕೃಷ್ಣ ಪರಮಹಂಸರ ಗೌರವಾರ್ಥ ನಡೆಯುತ್ತಿರುವ ಇದು ಆ ಮಹಾಪುರುಷನಿಗೆ ಒಂದು ವಿನೀತ ಸ್ಮಾರಕವಾಗಲೆಂದೇ ಆರಂಭಿಸಲ್ಪಟ್ಟಿದೆ." ಸ್ವಾಮಿ ರಾಮಕೃಷ್ಣಾನಂದರು ಹಾಕಿಕೊಟ್ಟ ಆದರ್ಶದಂತೆ, ವಿದ್ಯಾರ್ಥಿನಿಲಯವು ಬಡ ಹುಡುಗರನ್ನು ಬಾಳಿನಲ್ಲಿ ಉತ್ತಮ ಸ್ಥಿತಿಗೆ ಕೊಂಡೊಯ್ಯುವುದು ಮಾತ್ರವಲ್ಲದೆ, ಅವರಲ್ಲಿ ಪ್ರತಿಯೊಬ್ಬರೂ ಕಷ್ಟದಲ್ಲಿರುವವರಿಗೆ ಸಹಾಯಮಾಡುತ್ತ, ದೀನದಲಿತರ ಮತ್ತು ತುಳಿಯಲ್ಪಟ್ಟವರ ಮೇಲೆ ಅನುಕಂಪೆ ಮತ್ತು ಸೇವೆಗಳ ಸಂದೇಶವನ್ನು ಎಲ್ಲ ಕಡೆ ಹರಡಲು ಅವರಿಗೆ ತರಬೇತಿ ಕೊಡಲೂ ಕೂಡ ಬದ್ಧವಾಗಿದೆ.

ವಿದ್ಯಾರ್ಥಿನಿಲಯದ ಬಾಲಕರು ರಾಮಕೃಷ್ಣ ಮಠದಲ್ಲಿ ದಿವ್ಯತ್ರಯರ ಜಯಂತಿ ಉತ್ಸವದ ಸಮಯದಲ್ಲಿ ನಡೆಯುತ್ತಿದ್ದ ಬಡವಬಲ್ಲಿದರಿಗೆ ಅನ್ನದಾನ ಮಾಡುವ ಕೈಂಕರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಭಗಿನಿ ದೇವಮಾತಾ ೧೯೦೯ರಲ್ಲಿ ಒಮ್ಮೆ

ನಡೆದ ಈ ಬಗೆಯ ದರಿದ್ರನಾರಾಯಣ ಸೇವೆಯ ಬಗ್ಗೆ ಹೀಗೆ ಬರೆಯುತ್ತಾರೆ: 'ವಿದ್ಯಾರ್ಥಿನಿಲಯದ ಬಾಲಕರು ತರಕಾರಿಗಳನ್ನು ಹೆಚ್ಚಲು ಮಠಕ್ಕೆ ಬಂದಿದ್ದರು. ಹಲವಾರು ದೊಡ್ಡ ದೊಡ್ಡ ಬುಟ್ಟಿಗಳು ತುಂಬುವವರೆಗೆ ಗಂಟೆಗಟ್ಟಲೆ ಅವರು ತರಕಾರಿಗಳ ಸಿಪ್ಪೆ ಬಿಡಿಸುತ್ತಿದ್ದರು ಮತ್ತು ತುಂಡುತುಂಡಾಗಿ ಕೊಯ್ಯುತ್ತಿದ್ದರು.'

ವಿದ್ಯಾರ್ಥಿನಿಲಯವು ಬಾಲಕರಿಗೆ ಉತ್ತಮ ಶಿಕ್ಷಣ ಮತ್ತು ಚಾರಿತ್ರ್ಯವರ್ಧನೆಯ ಅವಕಾಶಗಳನ್ನು ಒದಗಿಸುತ್ತಿರುವುದನ್ನು ಕಂಡು, ಸ್ಥಿತಿವಂತರಾದವರೂ, ಹಣಕೊಟ್ಟಾದರೂ ತಮ್ಮ ಮಕ್ಕಳನ್ನು ವಿದ್ಯಾರ್ಥಿನಿಲಯಕ್ಕೆ ಸೇರಿಸಲು ಇಷ್ಟಪಟ್ಟರು. ಹೀಗೆ ಹಣಕೊಟ್ಟು ಸೇರಿದ ವಿದ್ಯಾರ್ಥಿಗಳಿಗೂ ಇತರ ವಿದ್ಯಾರ್ಥಿಗಳಿಗೂ ಯಾವುದೇ ಭೇದಭಾವ ಮಾಡುತ್ತಿರಲಿಲ್ಲ. ಅವರೆಲ್ಲರೂ ಇತರರಂತೆ ವಿದ್ಯಾರ್ಥಿನಿಲಯದ ನಿಯಮಗಳನ್ನು ಚಾಚೂ ತಪ್ಪದೆ ಪರಿಪಾಲಿಸಬೇಕಾಗಿತ್ತು. ಈ ವ್ಯವಸ್ಥೆ ಕೆಲವು ಸಮಯ ನಡೆಯಿತಾದರೂ ಸಫಲವಾಗದೆ, ಅದನ್ನು ನಿಲ್ಲಿಸಬೇಕಾಯಿತು.

೧೯೧೧ರಲ್ಲಿ ಸ್ವಾಮಿ ರಾಮಕೃಷ್ಣಾನಂದರು ಕಾಲವಾದರು. ತ್ಯಾಗಸೇವೆಗಳೇ ಮೂರ್ತಿವೆತ್ತ ಆ ದಿವ್ಯ ವ್ಯಕ್ತಿತ್ವದ ಹರಕೆಯಿಂದ ವಿದ್ಯಾರ್ಥಿನಿಲಯ ಆರಂಭಗೊಂಡಿತ್ತು. ೧೯೧೫ರಲ್ಲಿ ಮಹಾತ್ಮಾ ಗಾಂಧೀಜಿ ವಿದ್ಯಾರ್ಥಿನಿಲಯಕ್ಕೆ ಭೇಟಿಕೊಟ್ಟು ತಮ್ಮ ಮೆಚ್ಚುಗೆಯನ್ನು ಹೀಗೆ ವ್ಯಕ್ತಪಡಿಸಿದರು: 'ಇಂತಹ ಸಂಸ್ಥೆಯೊಂದನ್ನು ನೋಡಲು ಸಾಧ್ಯವಾದುದಕ್ಕೆ ನನಗೆ ಬಹಳ ಸಂತೋಷವಾಗಿದೆ. ಇಲ್ಲಿನ ಆಯೋಜಕರು ತೋರುತ್ತಿರುವ ಅಸದಳ ಉತ್ಸಾಹ ಮತ್ತು ಅವರ ಅನುಭವದ ಹಿನ್ನಲೆಗಳು ವಿದ್ಯಾರ್ಥಿಗಳು ಹಲವು ಹತ್ತು ಬಗೆಯಲ್ಲಿ ಪಡೆಯಬಹುದಾದ ಪ್ರಯೋಜನಗಳಿಗೆ ದ್ಯೋತಕವಾಗಿವೆ'

ಇಂಗ್ಲೆಂಡಿನಲ್ಲಿ ನೆಲೆಸಿದ್ದ ಭಾರತೀಯನೊಬ್ಬ ವಿದ್ಯಾರ್ಥಿನಿಲಯಕ್ಕೆ ದೇಣಿಗೆ ಕೊಟ್ಟ. ಅವನು ೧೯೨೫ರಲ್ಲಿ ಭಾರತಕ್ಕೆ ಬಂದು ವಿದ್ಯಾರ್ಥಿನಿಲಯಕ್ಕೆ ಭೇಟಿಕೊಟ್ಟ ಮೇಲೆ ಹೀಗೆ ಉದ್ಗರಿಸಿದ :

"ಈ ಕಾರ್ಯಕ್ಕೆ ಸೇವೆ ಸಲ್ಲಿಸಲು ನನಗೆ ಹೇಗೆ ಪ್ರೇರಣೆ ಬಂದಿತು ಗೊತ್ತೇನು? ನಾನು ಸ್ವಾಮಿ ವಿವೇಕಾನಂದರ ಪತ್ರಗಳನ್ನು ಓದುತ್ತಿದ್ದಾಗ ಈ ಸಾಲು ನನ್ನ ಗಮನ ಸೆಳೆಯಿತು: 'ಎಲ್ಲಿಯವರೆಗೆ ಲಕ್ಷಗಟ್ಟಲೆ ಜನ ಹಸಿವು ಮತ್ತು ಅಜ್ಞಾನಗಳಿಂದ ಬಳಲುತ್ತಿರುವರೋ, ಅಲ್ಲಿಯವರೆಗೆ ಅವರ ಖರ್ಚಿನಲ್ಲಿ ವಿದ್ಯಾಭ್ಯಾಸ ಮಾಡಿ, ಅವರೆಡೆಗೆ ಕಿಂಚಿತ್ತೂ ಕಣ್ಣುಹಾಯಿಸದ ಪ್ರತಿಯೊಬ್ಬನೂ ಕೃತಘ್ನನೆಂದು ನಾನು ಬಗೆಯುತ್ತೇನೆ. ' ಇದು ನನ್ನ ಮನಸ್ಸು ಕಲಕುವಂತೆ ಮಾಡಿತು. ಆ ಸಂದರ್ಭದಲ್ಲಿಯೆ ವಿದ್ಯಾರ್ಥಿನಿಲಯದ ಬಗ್ಗೆ ನನಗೆ ತಿಳಿದು ಬಂದಾಗ, ಅದಕ್ಕೆ ನನ್ನ ಕೈಲಾದಷ್ಟು ಕೊಡುಗೆ ನೀಡಬೇಕೆಂದು ನಾನು ಮನಸ್ಸು ಮಾಡಿದೆ."

೧೯೧೫ರ ಜುಲೈ ತಿಂಗಳ ಒಂದು ದಿನ ನಾಗಪಟ್ಟಿಣಂನ ಜಿಲ್ಲಾ ಮುನ್ಸಿಫ್ ಆಗಿದ್ದ ಶ್ರೀ ಎಸ್. ಜಿ. ಶ್ರೀನಿವಾಸಾಚಾರಿಯಾರ್ ವಿದ್ಯಾರ್ಥಿನಿಲಯದ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಮೈಲಾಪುರದ ಸುಲ್ಲಿವನ್ ಗಾರ್ಡನ್ ರಸ್ತೆಯಲ್ಲಿರುವ ತಮ್ಮ ಭೂಮಿಯನ್ನು ದಾನವಾಗಿ ಕೊಡುವ ಆಕಾಂಕ್ಷೆ ವ್ಯಕ್ತಪಡಿಸಿದರು. ಅದಕ್ಕೆ ಬೇಕಾದ ನ್ಯಾಯಾಂಗ ಕಾರ್ಯ ವಿಧಾನಗಳು ಮುಗಿಯಲು ಹಲವು ತಿಂಗಳುಗಳೇ ಬೇಕಾಯಿತು. ಕಡೆಗೂ ೧೯೦೭ರ ಮೇ ೧೦, ವೈಶಾಖ ಪೂರ್ಣಿಮೆಯಂದು, ಪವಿತ್ರ ಬುದ್ಧ ಜಯಂತಿಯ ಸಂದರ್ಭದಲ್ಲಿ ಸ್ವಂತ ಕಟ್ಟಡದ ಶಂಕುಸ್ಥಾಪನೆಯನ್ನು ಆಗ ಚೆನ್ನೈನಲ್ಲೇ ಇದ್ದ ಪರಮ ಪೂಜ್ಯ ಸ್ವಾಮಿ ಬ್ರಹ್ಮಾನಂದರು ನೆರವೇರಿಸಿದರು. ಅದೇ ಸಂದರ್ಭದಲ್ಲಿ ಒಂದು ಮನವಿ ಪತ್ರವನ್ನೂ ಹೊರಡಿಸಲಾಯಿತು. ಸ್ವಾಮಿ ಬ್ರಹ್ಮಾನಂದರ ಹೆಸರಿನಲ್ಲಿ ಹೊರಡಿಸಲಾದ ಆ ಮನವಿ ಪತ್ರದ ಮೂಲಕ ಕಟ್ಟಡಕ್ಕಾಗಿ ಧನಸಂಗ್ರಹಣೆಗೆ ಶ್ರೀ ರಾಮಸ್ವಾಮಿ ಅಯ್ಯಂಗಾರರು ಹಗಲೂ ಇರುಳೂ ದುಡಿದರು. ಮೂರು ತಿಂಗಳೊಳಗೆ ಸುಮಾರು ೫೦,೦೦೦ ರೂಪಾಯಿ ಸಂಗ್ರಹವಾಯಿತು. ಅದಲ್ಲದೆ ಅಂದಿನ ಮದ್ರಾಸ್ ಸರ್ಕಾರದ ಸಹಾಯಧನವೂ ದೊರಕಿತು. ಹಲವು ಜನ ಮಹನೀಯರು ತನುಮನ ಧನಗಳ ಮೂಲಕ ಈ ಕಾರ್ಯದಲ್ಲಿ ಸಹಭಾಗಿಗಳಾದರು. ಮೊದಲನೆಯ ಮಹಾಯುದ್ಧ ೧೯೧೯ರಲ್ಲಿ ಆರಂಭವಾದ ಕಾರಣ ಕಟ್ಟಡಕ್ಕೆ ಸಲಕರಣೆಗಳನ್ನು ಮತ್ತು ಹಣ ಸಹಾಯವನ್ನು ಪಡೆಯುವುದು ಬಹಳ ಕಷ್ಟವಾಗಿ ತೋರಿತು. ಅಂತೂ ಇಂತೂ ೧೯೨೧ರ ಪ್ರಾರಂಭದ ವೇಳೆಗೆ ಕಟ್ಟಡದ ಬಹು ಭಾಗ ಪೂರ್ಣಗೊಂಡಿತ್ತು. ಸ್ವಾಮಿ ಬ್ರಹ್ಮಾನಂದಜಿ



ಚೆನ್ನೈ ವಿದ್ಯಾರ್ಥಿ ನಿಲಯದ ಸಂಸ್ಥಾಪಕರಾದ
ಶ್ರೀ ರಾಮಸ್ವಾಮಿ ಅಯ್ಯಂಗಾರರು

ಮತ್ತು ಸ್ವಾಮಿ ಶಿವಾನಂದಜಿ ಅದೇ ಸಮಯಕ್ಕೆ ಚೆನ್ನೈಗೆ ಬಂದರು. ಸ್ವಾಮಿ ಬ್ರಹ್ಮಾನಂದಜಿಯವರೇ ಉದ್ಘಾಟನೆಗೆ ಅಕ್ಷಯ ತೃತೀಯ ತಿಥಿಯನ್ನು ಗೊತ್ತು ಮಾಡಿದರು.

ಅಂದು ಮಂಗಳವಾರ, ೧೯೨೧ರ ಮೇ ತಿಂಗಳು, ೧೦ನೆಯ ದಿನಾಂಕ. ಬೆಳಗ್ಗೆ ೮ ಗಂಟೆಯ ಮುಹೂರ್ತ. ವಿದ್ಯಾರ್ಥಿ ನಿಲಯದ ಹಳೆಯ ಕಟ್ಟಡದಿಂದ ವಿದ್ಯಾರ್ಥಿಗಳ ಮತ್ತು ಹಿತೈಷಿಗಳ ಶೋಭಾಯಾತ್ರೆ ಆರಂಭವಾಯಿತು. ಪೂರ್ಣಕುಂಭ ಗೌರವದೊಂದಿಗೆ ಶ್ರೀರಾಮಕೃಷ್ಣರ ಮತ್ತು ಪವಿತ್ರ ಸಾಲಗ್ರಾಮದ ಮೆರವಣಿಗೆ ಮೈಲಾಪುರದ ಮುಖ್ಯ ಬೀದಿಗಳಲ್ಲಿ ಸಾಗಿತು. ಸುಮಾರು ೯ ಗಂಟೆಯ ಸಮಯಕ್ಕೆ ಹೊಸ ಕಟ್ಟಡವನ್ನು ಮೆರವಣಿಗೆ ಮುಟ್ಟಿತು. ಸ್ವಾಮಿ ಬ್ರಹ್ಮಾನಂದರು ಹೊಸ್ತಿಲ ಬಳಿ ಸ್ವಲ್ಪಹೊತ್ತು ನಿಂತು ಧ್ಯಾನ ಮಾಡಿ, ಶ್ರೀರಾಮಕೃಷ್ಣರ ಅನುಗ್ರಹವನ್ನು ಆವಾಹಿಸಿದರು. ನಂತರ ಅವರು ತಮ್ಮ ಬಲಗಾಲನ್ನು ಇಟ್ಟು ಕಟ್ಟಡವನ್ನು ಪ್ರವೇಶಿಸುತ್ತಿದ್ದಂತೆ, ಅವರ ಮೇಲೆ ಪುಷ್ಪವೃಷ್ಟಿಯಾಯಿತು. ಅವರನ್ನು ಹಿಂಬಾಲಿಸಿ, ಗಣ್ಯರು ಮತ್ತು ವಿದ್ಯಾರ್ಥಿಗಳು ಕಟ್ಟಡದ ಒಳಕ್ಕೆ ಹೋದರು. ಸ್ವಾಮಿ ಬ್ರಹ್ಮಾನಂದಜಿಯವರು ಸಾಲಗ್ರಾಮಕ್ಕೆ ಅಭಿಷೇಕ ಮಾಡಿ, ಪೂಜೆಯನ್ನು ಆರಂಭಿಸಿದರು. ನಂತರ ಸಮಾಧಿಮಗ್ನರಾಗಿ ಬಹುಕಾಲ ಅದೇ ಸ್ಥಿತಿಯಲ್ಲಿ ಇದ್ದರು. ರಾಮಕೃಷ್ಣ ಮಠದ ಅಂದಿನ ಅಧ್ಯಕ್ಷರಾದ ಸ್ವಾಮಿ ಶರ್ವಾನಂದರು ಪೂಜೆಯನ್ನು ಮುಂದುವರೆಸಿ, ಹೋಮ ಮಾಡಿದರು. ವೇದಘೋಷ ಮಧ್ಯಾಹ್ನದವರೆಗೂ ನಡೆಯುತ್ತಲೇ ಇತ್ತು. ಮಧ್ಯಾಹ್ನ ಎಲ್ಲರಿಗೂ ಪ್ರಸಾದ ವಿತರಿಸಲಾಯಿತು. ಸಂಜೆ ರಾಮನಾಮ ಸಂಕೀರ್ತನೆಯನ್ನು ನಡೆಸಲಾಯಿತು ಮತ್ತು ನಂತರ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವೂ ಇತ್ತು.

ಒಂದು ಸಂಜೆ ಸ್ವಾಮಿ ಬ್ರಹ್ಮಾನಂದರು ವಿದ್ಯಾರ್ಥಿ ನಿಲಯಕ್ಕೆ ಬಂದು ಅಲ್ಲೇ ಒಂದು ತಿಂಗಳ ಕಾಲ ತಂಗಿದರು. ಆ ಕಾಲದಲ್ಲಿ ವಿದ್ಯಾರ್ಥಿನಿಲಯದ ವಾತಾವರಣವು ಭಗವತ್ಪ್ರೇಮ, ಮೃದುತ್ವ, ಶಾಂತಿ ಮತ್ತು ಆಧ್ಯಾತ್ಮಿಕ ಭಾವದಿಂದ ತುಂಬಿ ತುಳುಕಾಡುತ್ತಿತ್ತು. ಹೀಗೆ ನಿತ್ಯಸಿದ್ಧರಾದ ಒಬ್ಬ ಮಹಾಪುರುಷನ ಅಕ್ಕರೆಯಲ್ಲಿ ನೂತನ ವಸತಿಗೃಹದಲ್ಲಿ ಬಾಲಕರು ತಮ್ಮ ಜೀವನವನ್ನು ಆರಂಭಿಸಿದರು. ಅವರು ಹೊರಡುವಾಗ ಈ ಮಾತುಗಳನ್ನು ರಾಮಸ್ವಾಮಿ ಅಯ್ಯಂಗಾರರಿಗೆ ಹೇಳಿದರು: ' ಶ್ರೀಗುರು ಮಹಾರಾಜರ ಅನುಗ್ರಹದಿಂದ ಬಡವರಿಗಾಗಿ ಒಂದು ಅರಮನೆಯೇ ನಿರ್ಮಾಣವಾಗಿದೆ. ಇದರಿಂದ ಈಗ ನಿನ್ನ ಜವಾಬ್ದಾರಿಯೂ ಹೆಚ್ಚಾಗಿದೆ. ಇಲ್ಲಿ ಯಾವ ಬಗೆಯ ಭೋಗ ಭಾವನೆ ಅಥವಾ ಆರಾಮದ ಬಾಳುವೆಯು ಸುಳಿಯದಂತೆ ಎಚ್ಚರವಹಿಸಬೇಕು, ಏಕೆಂದರೆ ಅವು ಈ ವಿದ್ಯಾರ್ಥಿನಿಲಯ ಯಾವ ಧ್ಯೇಯೋದ್ದೇಶಗಳ ಮೇಲೆ ಸ್ಥಾಪಿತವಾಗಿದೆಯೋ ಅವನ್ನು ಕಳಂಕಗೊಳಿಸುತ್ತವೆ.'

ಶ್ರೀರಾಮಕೃಷ್ಣ ವಿದ್ಯಾರ್ಥಿನಿಲಯ ೧೯೨೨ರಲ್ಲಿ ಆವಾಸೀ ಹೈಸ್ಕೂಲು ಭಾಗವನ್ನು ಹೊಂದಿತು. ಅದಕ್ಕಾಗಿ ಪ್ರತ್ಯೇಕ ಕಟ್ಟಡ ಭಾಗವನ್ನು ನಿರ್ಮಿಸಲಾಯಿತು. ನಂತರ ಕೈಗಾರಿಕಾ ತರಬೇತಿ ಕೇಂದ್ರವೊಂದು ಆರಂಭವಾಯಿತು. ೧೯೩೦ರಲ್ಲಿ ವಿದ್ಯಾರ್ಥಿ ನಿಲಯದ ಬೆಳ್ಳಿಹಬ್ಬವನ್ನು ಆಚರಿಸಲಾಯಿತು. ಚೆಂಗ್ಲೆ ಜಿಲ್ಲೆಯ ಉತ್ತರಮೇರೂರು ಗ್ರಾಮದ ಹತ್ತಿರವಿರುವ ಮಲ್ಲಿಯಕಂರಣೈ ಎಂಬ ಸಣ್ಣಹಳ್ಳಿಯಲ್ಲಿರುವ ೧೪೦ ಎಕರೆ ಭೂಮಿಯನ್ನು ಶ್ರೀ ವೆಂಕಟವರದ ಐಯ್ಯಂಗಾರ್ ಎನ್ನುವವರು ದಾನ ಮಾಡಿದರು. ಅಲ್ಲಿ ಒಂದು ತೋಟ ಮತ್ತು ಹೊಲಗಳು ಇದ್ದು, ಪರಿಶಿಷ್ಟ ವರ್ಗದ ಮಕ್ಕಳಿಗೆ ಹಾಸ್ಟೆಲ್ ಮತ್ತು ಒಂದು ಹೈಸ್ಕೂಲ್ ಅನ್ನು ನಡೆಸಲಾಗುತ್ತಿದೆ. ಪ್ರಾರಂಭದಿಂದಲೂ ವಿದ್ಯಾರ್ಥಿ ನಿಲಯದ ಭಾಗವೇ ಆಗಿದ್ದ ಈ ಕೇಂದ್ರ ೨೦೦೦ ಇಸವಿಯಲ್ಲಿ ರಾಮಕೃಷ್ಣ ಮಿಷನ್ನಿನ ಒಂದು ಪ್ರತ್ಯೇಕ ಕೇಂದ್ರವಾಯಿತು. ೧೯೪೦ರ ದಶಕದಲ್ಲಿ ರಾಮಕೃಷ್ಣ ಮಿಷನ್ನಿನ ವತಿಯಿಂದ ಚೆನ್ನೈನ ತ್ಯಾಗರಾಯ ಬಡಾವಣೆಯಲ್ಲಿ ಅನೇಕ ವಿದ್ಯಾಸಂಸ್ಥೆಗಳು ಹುಟ್ಟಿಕೊಂಡವು. ಅದಕ್ಕೆ ಮೂಲ ಪ್ರೇರಣೆ ಮತ್ತು ಸಹಕಾರ ಒದಗಿ ಬಂದಿದ್ದು ರಾಮಕೃಷ್ಣ ವಿದ್ಯಾರ್ಥಿನಿಲಯದಿಂದಲೇ ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸಿ. ರಾಮಸ್ವಾಮಿ ಐಯ್ಯಂಗಾರರ ನಂತರ ವಿದ್ಯಾರ್ಥಿನಿಲಯವನ್ನು ಸಮರ್ಥವಾಗಿ ನಡೆಸಿದವರೆಂದರೆ ಸಿ, ರಾಮಾನುಜಾಚಾರಿಯಾರ್ ಅವರು. ಈ ಪವಿತ್ರ ಕಾರ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ ಇತರ ಮಹನೀಯರೆಂದರೆ ಎಸ್. ವಾಸುದೇವಾಚಾರಿಯರ್, ಅಣ್ಣಾ ಎನ್. ಸುಬ್ರಮಣ್ಯಂ, ಟಿ.ಎಸ್. ಕೃಷ್ಣರಾವ್ ಮುಂತಾದವರು.

ಶತಮಾನೋತ್ಸವ ಸಂದರ್ಭದಲ್ಲಿ, ವಿದ್ಯಾರ್ಥಿ ನಿಲಯದ ಈಗಿನ ಮುಖ್ಯಸ್ಥರಾದ ಸ್ವಾಮಿ ವೀತಭಯಾನಂದಜಿಯವರ ನೇತೃತ್ವದಲ್ಲಿ ಸುಮಾರು ೫ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಖರ್ಚಿನಲ್ಲಿ ಈಗಿರುವ ಹಳೆಯ ಕಟ್ಟಡ ಸಮುಚ್ಚಯದ ಜಾಗದಲ್ಲಿ ಹೊಸ ಕಟ್ಟಡ ಸಮುಚ್ಚಯದ ನಿರ್ಮಾಣಕ್ಕಾಗಿ ಯೋಜನೆಯು ರೂಪಿತಗೊಂಡಿದೆ. ಆ ಮೂಲಕ ಈ ವಿದ್ಯಾರ್ಥಿ ಸಂಸ್ಥೆಯು ತನ್ನ ನೂರು ವರ್ಷಗಳ ಆದರ್ಶ ಪರಂಪರೆಯ ಹಿನ್ನಲೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ಮತ್ತಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಸಾಧ್ಯವಾಗುತ್ತದೆ.

ಹೀಗೆ ಮೈಸೂರಿನ ಒಬ್ಬ ಅನಾಥ ಬಾಲಕನ ಆರೈಕೆಯಿಂದ ಪ್ರಾರಂಭವಾದ ಈ ಮಹಾನ್ ಸಂಸ್ಥೆ ನೂರು ವರ್ಷಗಳು ಕಳೆದರೂ ಇಂದೂ ಚಿರನೂತನವಾಗಿದೆ. ಏಕೆಂದರೆ ಅದು ನಿತ್ಯಸತ್ಯ ಮೌಲ್ಯಗಳ ಭದ್ರ ಅಡಿಪಾಯದ ಮೇಲೆ ನಿಂತಿದೆ. ಸ್ವಾಮಿ ವಿವೇಕಾನಂದರು ನೀಡಿದ ತ್ಯಾಗಸೇವೆಗಳ ಆದರ್ಶದ ದ್ಯೋತಕವಾಗಿದೆ. ಭಾರತದ ಸಜ್ಜನಿಕೆ ಮತ್ತು ಆಧ್ಯಾತ್ಮಿಕ ಸಂಸ್ಕೃತಿಗಳು ಈ ಅಧುನಿಕ ಯುಗದಲ್ಲೂ ತಲೆಯೆತ್ತಿ ನಿಂತಿರುವ ಅದ್ಭುತ ಸ್ಮಾರಕವಾಗಿದೆ.

◆